KARN220019592025

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನಪಟ್ಟಣ.**

**ದಿನಾಂಕಃ 18ನೇ ಮಾರ್ಚ್ 2026**

**-:ಉಪಸ್ಥಿತರು:-**

**ಶ್ರೀ ಯೋಗೇಶ ಕೆ.**
ಬಿ.ಎ.ಎಲ್. ಎಲ್.ಎಲ್.ಎಂ. ಪಿ.ಜಿ.ಡಿ.ಎಚ್.ಆರ್.ಎಂ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನಪಟ್ಟಣ.

**ಸಿ.ಮಿಸ್.ನಂ. 513/2025**

**ಅರ್ಜಿದಾರರು :** 01. ಶ್ರೀ ಡಿ. ಚಿಕ್ಕನಂಜೇಗೌಡ
ಬಿನ್ ಲೇಟ್ ದೊಡ್ಡನಂಜೇಗೌಡ,
ವಯಸ್ಸು 49 ವರ್ಷ,

02. ಶ್ರೀಮತಿ ದೇವಿರಮ್ಮ
ಬಿನ್ ಲೇಟ್ ನಂಜುಂಡೇಗೌಡ,
ವಯಸ್ಸು 85 ವರ್ಷ,

03. ಶ್ರೀಮತಿ ಮಲ್ಲಮ್ಮ
ಕೋಂ ಲೇಟ್ ದೊಡ್ಡನಂಜೇಗೌಡ,
ವಯಸ್ಸು 85 ವರ್ಷ,

04. ಶ್ರೀಮತಿ ಶಿವನಂಜಮ್ಮ
ಬಿನ್ ಲೇಟ್ ದೊಡ್ಡನಂಜೇಗೌಡ
ವಯಸ್ಸು 70 ವರ್ಷ,

05. ಶ್ರೀಮತಿ ಕಾಡಮ್ಮ
ಬಿನ್ ಲೇಟ್ ದೊಡ್ಡ ನಂಜೇಗೌಡ,
ವಯಸ್ಸು 51 ವರ್ಷ,

06. ಶ್ರೀ ಶಿವನಂಜ
ಬಿನ್ ಲೇಟ್ ದೊಡ್ಡನಂಜೇಗೌಡ
ವಯಸ್ಸು 60 ವರ್ಷ,

07. ಶ್ರೀಮತಿ ಪುಟ್ಟತಾಯಮ್ಮ
ಕೋಂ ಲೇಟ್ ಬೋಗೇಗೌಡ
ವಯಸ್ಸು 50 ವರ್ಷ,

08. ಶ್ರೀಮತಿ ಪಾರ್ವತಮ್ಮ
ಬಿನ್ ಲೇಟ್ ದೊಡ್ಡನಂಜೇಗೌಡ
ವಯಸ್ಸು 57 ವರ್ಷ,

09. ಶ್ರೀ ನಂಜುಂಡೇಗೌಡ
ಬಿನ್ ಲೇಟ್ ದೊಡ್ಡನಂಜೇಗೌಡ
ವಯಸ್ಸು 55 ವರ್ಷ,

10. ಶ್ರೀ ವಿಷಕಂಠ
ಬಿನ್ ಲೇಟ್ ದೊಡ್ಡನಂಜೇಗೌಡ
ವಯಸ್ಸು 53 ವರ್ಷ,

11. ಶ್ರೀ ಕಪನಿಗೌಡ
ಬಿನ್ ಲೇಟ್ ದೊಡ್ಡನಂಜೇಗೌಡ
ವಯಸ್ಸು 51 ವರ್ಷ,

ಎಲ್ಲರ ವಾಸಃ
ನಂ.28, ಅಂಕುಶನಹಳ್ಳಿ ಗ್ರಾಮ,
ವಿ.ಪುರ ಹೋಬಳಿ,
ಚನ್ನಪಟ್ಟಣ ತಾಲ್ಲೂಕು,
ಬೆಂಗಳೂರು ದಕ್ಷಿಣ ಜಿಲ್ಲೆ.

**(ಪ್ರತಿನಿಧಿಸುವವರುಃ ಶ್ರೀ ಎ.ಆರ್.ಎನ್ ವಕೀಲರು)**

**- ವಿರುದ್ಧ -**

**ಎದುರುದಾರರು :** ತಹಶೀಲ್ದಾರ್ ರವರು
ಜನನ ಮತ್ತು ಮರಣ
ನೋಂದಣಾಧಿಕಾರಿಗಳು,
ಚನ್ನಪಟ್ಟಣ ತಾಲ್ಲೂಕು,
ಬೆಂಗಳೂರು ದಕ್ಷಿಣ ಜಿಲ್ಲೆ.

**(ಏಕಪಕ್ಷೀಯವಾಗಿರುತ್ತಾರೆ)**

**-: <u>ಆದೇಶ</u> :-**

1. ಈ ಅರ್ಜಿಯನ್ನು ಜನನ ಮರಣ ನೋಂದಣಿ ಖಾಯ್ದೆ ಕಲಂ 13(3)ರ ಅನ್ವಯ 1ನೇ ಅರ್ಜಿದಾರರ ಅಜ್ಜಿಯವರಾದ ಶ್ರೀಮತಿ ಮಲ್ಲಮ್ಮ ಕೋಂ ನಂಜುಂಡೇಗೌಡ ಇವರ ಮರಣ ದಿನಾಂಕವನ್ನು ನೊಂದಾಯಿಸಿಕೊಳ್ಳಲು ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಿರುತ್ತಾರೆ.

2. ಎದುರುದಾರರಿಗೆ ನೋಟಿಸ್ಸು ನೀಡಿದರೂ ಕೂಡ ಹಾಜರಾಗಿರುವುದಿಲ್ಲ. ಆದ್ದರಿಂದ ಈ ಪ್ರಕರಣದಲ್ಲಿ ಏಕ ಪಕ್ಷೀಯವಾಗಿ ಮುಂದುವರಿಯಲಾಗಿದೆ.

3. ವಿಚಾರಣೆಯ ಕಾಲಕ್ಕೆ ಅರ್ಜಿದಾರನನ್ನು ಪಿಡಬ್ಲ್ಯೂ-1ಎಂದು ವಿಚಾರಣೆ ಮಾಡಿಕೊಂಡಿದ್ದು, 4 ದಾಖಲೆಗಳನ್ನು ಹಾಜರುಪಡಿಸಿ ಅವುಗಳನ್ನು ನಿಪಿ-1 ರಿಂದ 4 ರಂತೆ ಗುರುತಿಸಿಕೊಂಡಿರುತ್ತಾರೆ.

4. ಅರ್ಜಿದಾರರ ಪರ ವಕೀಲರ ವಾದಗಳನ್ನು ಆಲಿಸಲಾಯಿತು.

5. ಈ ಕೆಳಗಿನ ಅಂಶಗಳು ನ್ಯಾಯಾಲಯದ ಪರ್ಯಾಲೋಚನೆಗೆ ಉದ್ಭವಿಸಿರುತ್ತದೆ.

1. ಅರ್ಜಿದಾರರ ಅರ್ಜಿಯನ್ನು ಪುರಸ್ಕರಿಸಲು ಸಕಾರಣಗಳಿವೆಯೇ?

2. ಏನು ಆದೇಶ ?

6. ಮೇಲ್ಕಂಡ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನನ್ನ ಉತ್ತರಗಳು ಕೆಳಕಂಡಂತೆ ಇರುತ್ತವೆ

**-: ಅಂಶಗಳು :-**

ಅಂಶ-1: ಸಕಾರಾತ್ಮಕವಾಗಿ,

ಅಂಶ-2: ಅಂತಿಮ ಆದೇಶದಂತೆ.

**-: ಕಾರಣಗಳು :-**

**7. ಅಂಶ-1:- 1ನೇ** ಅರ್ಜಿದಾರರು ತಮ್ಮ ವಿಚಾರಣೆಯ ಸಂದರ್ಭದಲ್ಲಿ ಸಲ್ಲಿಸಿದ ಪ್ರಮಾಣಪತ್ರದಲ್ಲಿ ದಿನಾಂಕ 28.03.1975 ರಂದು ತಮ್ಮ ಅಜ್ಜಿಯವರಾದ ಶ್ರೀಮತಿ ಮಲ್ಲಮ್ಮ ಕೋಂ ನಂಜುಂಡೇಗೌಡ ರವರು ಅಂಕುಶನಹಳ್ಳಿ ಗ್ರಾಮ, ವಿ.ಪುರ ಹೋಬಳಿ, ಚನ್ನಪಟ್ಟಣ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಮೃತಹೊಂದಿರುತ್ತಾರೆ

ಎಂತಲೂ ಮತ್ತು ಈಗ ಶ್ರೀಮತಿ ಮಲ್ಲಮ್ಮ ಕೋಂ ನಂಜುಂಡೇಗೌಡ ರವರ ಮರಣ ಪತ್ರವು ಅವಶ್ಯವಾಗಿ ಬೇಕಾಗಿರುವುದರಿಂದ ಅದನ್ನು ಕೋರಿ ಅರ್ಜಿ ಸಲ್ಲಿಸಿದಾಗ ನಿಪಿ.1 ರಂತೆ ಅಲಭ್ಯ ಪ್ರಮಾಣ ಪತ್ರ ನೀಡಿದ್ದು, ಶ್ರೀಮತಿ ಮಲ್ಲಮ್ಮ ಕೋಂ ನಂಜುಂಡೇಗೌಡ ರವರ ಮರಣ ನೋಂದಣಿಯಾಗಿಲ್ಲ ಎಂದು ಗೊತ್ಅಜ್ಜಿತು ಎಂತಲೂ ಹೇಳುತ್ತಾ ವಿಳಂಬವನ್ನು ಮನ್ನಿಸಿ ಶ್ರೀಮತಿ ಮಲ್ಲಮ್ಮ ಕೋಂ ನಂಜುಂಡೇಗೌಡ ರವರ ಮರಣ ದಿನಾಂಕವನ್ನು ನೋಂದಣಿ ಮಾಡಲು ಕೋರಿರುತ್ತಾರೆ. ನಿಪಿ.1 ರಿಂದ ನಿಪಿ.4ನ್ನು ಗಮನಿಸಿದರೆ ಶ್ರೀಮತಿ ಮಲ್ಲಮ್ಮ ಕೋಂ ನಂಜುಂಡೇಗೌಡ ಇವರ ಮರಣವು ಎದುರುದಾರರ ಬಳಿ ನೋಂದಣಿಯಾಗಿಲ್ಲ ಅಂತ ಕಂಡು ಬರುತ್ತದೆ. ಅರ್ಜಿಯಲ್ಲಿಯ ಅಂಶವನ್ನು ಪಿಡಬ್ಲ್ಯೂ -1 ಪುನರುಚ್ಚರಿಸಿದ್ದು, ಅದನ್ನು ಪಾಟೀ ಸವಾಲಿನಲ್ಲಿ ನಿರಾಕರಿಸಲಾಗಿಲ್ಲ. ಏಕೆಂದರೆ ಎದುರುದಾರರು ನ್ಯಾಯಾಲಯಕ್ಕೆ ಹಾಜರಾಗಿಲ್ಲ. ಆದ್ದರಿಂದ ಸದರಿ ಪ್ರಮಾಣಪತ್ರದಲ್ಲಿರುವ ಅಂಶಗಳನ್ನು ನಿಜವೆಂದು ಒಪ್ಪಿಕೊಳ್ಳಲೇಬೇಕಿರುತ್ತದೆ. ಶ್ರೀಮತಿ ಮಲ್ಲಮ್ಮ ಕೋಂ ನಂಜುಂಡೇಗೌಡ ರವರ ಮರಣ ದಿನಾಂಕವು ನೋಂದಣಿಯಾಗದೇ ಇರುವುದರಿಂದ ಅರ್ಜಿ ಸಲ್ಲಿಸುವಲ್ಲಿ ಆದ ವಿಳಂಬವನ್ನು ಮನ್ನಿಸಿ ಸದರಿ ಮರಣ ದಿನಾಂಕವನ್ನು ನೋಂದಾಯಿಸುವಂತೆ ಎದುರುದಾರರಿಗೆ ಆದೇಶ ಮಾಡುವುದು ಸೂಕ್ತ ಎನ್ನುವುದಾಗಿ ಅಭಿಪ್ರಾಯ ಪಟ್ಟಿದ್ದು ತನ್ಮೂಲಕ ಪ್ರಸಕ್ತ ಅಂಶವನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

8. **ಅಂಶ-2:-** ಈ ಮೇಲೆ ವಿವರಿಸಿದ ಕಾರಣಗಳು ಮತ್ತು ನಾನು ಹೊಂದಿದ ಅಭಿಪ್ರಾಯಗಳಿಗಾಗಿ ಈ ಕೆಳಕಂಡಂತೆ ಆದೇಶ ಮಾಡುತ್ತಿದ್ದೇನೆ.

## ಆದೇಶ

ಅರ್ಜಿದಾರರ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಶ್ರೀಮತಿ ಮಲ್ಲಮ್ಮ ಕೋಂ ನಂಜುಂಡೇಗೌಡ ರವರು ದಿನಾಂಕಃ 28.03.1975 ರಂದು ಅಂಕುಶನಹಳ್ಳಿ ಗ್ರಾಮ, ವಿ.ಪುರ ಹೋಬಳಿ, ಚನ್ನಪಟ್ಟಣ ತಾಲ್ಲೋಕು, ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಮರಣ ಹೊಂದಿರುತ್ತಾರೆ ಎಂದು ಸಂಬಂಧಪಟ್ಟ ದಾಖಲೆಯಲ್ಲಿ ದಾಖಲಿಸಲು ಎದುರುದಾರರಿಗೆ ಈ ಮೂಲಕ ಆದೇಶಿಸಲಾಗಿದೆ.

ವಿಳಂಬ ಶುಲ್ಕವನ್ನು ಎದುರುದಾರರಿಗೆ ಪಾವತಿಸುವಂತೆ
ಅರ್ಜಿದಾರರಿಗೆ ಈ ಮೂಲಕ ನಿರ್ದೇಶಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಅವರು ಗಣಕೀಕೃತಗೊಳಿಸಿದ ತರ್ಜುಮೆಯನ್ನು ತಿದ್ದಿ ಸಹಿ ಮಾಡಿ **ದಿನಾಂಕ 18ನೇ ಮಾರ್ಚ್ 2026** ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ.)

**(ಯೋಗೇಶ ಕೆ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,ಚನ್ನಪಟ್ಟಣ.

## -: ಅನುಬಂಧ :-

**ಅರ್ಜಿದಾರನ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿಃ**

ಪ್ರಾಸಾ-1 : ಶ್ರೀ ಡಿ.ಚಿಕ್ಕನಂಜೇಗೌಡ

**ಎದುರುದಾರರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿಃ**

- ಇಲ್ಲ -

**ಅರ್ಜಿದಾರನ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ**

ನಿಪಿ-1 : ಅಲಭ್ಯ ಪ್ರಮಾಣ ಪತ್ರ
ನಿಪಿ-2 : ವಂಶವೃಕ್ಷ
ನಿಪಿ-3 ಮತ್ತು 4 : ದಿನಪತ್ರಿಕೆಗಳು

**ಎದುರುದಾರರ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ**

- ಇಲ್ಲ -

**(ಯೋಗೇಶ ಕೆ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,ಚನ್ನಪಟ್ಟಣ.